# ಕರ್ನಾಟಕ ಲೋಕಾಯುಕ್ತ

ನಂ. ಕಂಪ್ಲೆಂಟ್/ಉಪಲೋಕ್/ಬಿಡಿ/1978/2022 ಬಹುಮಹಡಿಗಳ ಕಟ್ಟಡ,
ಮಂಡನಾಧಿಕಾರಿಗಳ ಶಾಖೆ, ಪಿ.ಒ. ಎ.ಆರ್.ಇ.17 ಡಾ: ಅಂಬೇಡ್ಕರ್ ವೀದಿ,ಬೆಂಗಳೂರು,
ದಿನಾಂಕ: 14/11/2022

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 12(3)ರ ಅನ್ವಯ ವರದಿ

*****

**ವಿಷಯ:** ಸರ್ಕಾರಿ ನೌಕರರಾದ ಶ್ರೀ ಮರಿಸ್ವಾಮಿ ತಂದೆ ಲೇಟ್ ಗುಂಡಯ್ಯ, ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳು, ಡಾ: ಬಿ. ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ, ದಾವಣಗೆರೆ ಜಿಲ್ಲೆ ಇವರು ಕರ್ತವ್ಯ ಲೋಪ/ದುರ್ನಡತೆ ಎಸಗಿರುವ ಬಗ್ಗೆ.

*****

ಪೊಲೀಸ್ ಅಧೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಪೂರ್ವ ವಲಯ, ದಾವಣಗೆರೆ ಇವರು ದಾವಣಗೆರೆ ಜಿಲ್ಲೆಯ ಭ್ರಷ್ಟಾಚಾರ ನಿಗ್ರಹ ದಳ ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕರು (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ಸಲ್ಲಿಸಿದ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ ವರದಿಯಲ್ಲಿ ಶ್ರೀ ಮರಿಸ್ವಾಮಿ ತಂದೆ ಲೇಟ್ ಗುಂಡಯ್ಯ, ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳು, ಡಾ: ಬಿ. ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ, ದಾವಣಗೆರೆ ಜಿಲ್ಲೆ (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ಇವರನ್ನು ಶ್ರೀ ಜಯಾನಾಯ್ಕ ಬಿನ್ ಲೇಟ್ ಟಾಕ್ರ್ಯಾನಾಯ್ಕ, ಪರಶುರಾಂಪುರ ಗ್ರಾಮ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರು ಭೇಟಿ ಮಾಡಿದಾಗ ಲಂಚದ ಹಣಕ್ಕೆ ಬೇಡಿಕೆ ಇಟ್ಟು, ಅದನ್ನು ಪಡೆದು ದುರ್ನಡತೆ ತೋರಿಸಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂ ಪ್ರೇರಿತ ತನಿಖೆ ಕೈಗೊಂಡಿರುತ್ತಾರೆ.

2) **ದೂರಿನ ಸಂಕ್ಷಿಪ್ತ ವಿವರಣೆ:-** ದೂರುದಾರರ ತಾಯಿ ತಮ್ಮ ಬಾಬ್ತು ಜಮೀನಿನಲ್ಲಿ ಡಾ: ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಗಂಗಾ ಕಲ್ಯಾಣ ಯೋಜನೆಯಡಿ ಬೋರ್ ಕೊರೆಸಲು 2019 ನೇ ಸಾಲಿನಲ್ಲಿ ಅರ್ಜಿ ಸಲ್ಲಿಸಿದ್ದು, ಪ್ರಸ್ತುತ ಆಯ್ಕೆಯಾಗಿ ಬೋರ್ ಪಾಯಿಂಟ್ ಮಾಡುವ ಸಮಯದಲ್ಲಿ ಎದುರುದಾರರು ರೂ. 2,000/-

ಲಂಚದ ಹಣವನ್ನು ಪಡೆದು 'ಇನ್ನೂ ನೋಡ್ಕೋಬೇಕು' ಅಂತಾ ಹೇಳಿ ದಿನಾಂಕ 07/01/2020 ರಂದು ಬೋರ್ ಕೊರೆಸಲು ವರ್ಕ್ ಆರ್ಡರ್ ನೀಡಲು, ದೂರುದಾರರಿಂದ 5,000/- ರೂಪಾಯಿ ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ. ಸದರಿ ಲಂಚದ ಹಣ ನೀಡಲು ಇಷ್ಟವಿಲ್ಲದ ಕಾರಣ, ದೂರುದಾರರು ದಾವಣಗೆರೆ ಜಿಲ್ಲೆ ಎ.ಸಿ.ಬಿ. ಪೊಲೀಸ್ ಠಾಣೆಗೆ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿದ ಸಂಭಾಷಣೆಯೊಂದಿಗೆ ದೂರನ್ನು ದಿನಾಂಕ 08/01/2020 ರಂದು ನೀಡಿರುತ್ತಾರೆ. ಈ ಬಗ್ಗೆ ದಾವಣಗೆರೆ ಎ.ಸಿ.ಬಿ. ಠಾಣೆಯ ಅಧಿಕಾರಿಗಳು ದೂರನ್ನು ಪಡೆದು ತಮ್ಮ ಠಾಣೆಯ ಗುನ್ನೆ ನಂ. 01/2020 ರಲ್ಲಿ ಪ್ರಕರಣ ನೋಂದಾಯಿಸಿಕೊಂಡಿರುತ್ತಾರೆ.

3) ತನಿಖಾಧಿಕಾರಿಗಳು ದಿನಾಂಕ 08/01/2020 ರಂದು ನೆರಳು ಸಾಕ್ಷಿ ಹಾಗೂ ಸಹ ಪಂಚರನ್ನು ಠಾಣೆಗೆ ಬರ ಮಾಡಿಕೊಂಡು ದೂರುದಾರರನ್ನು ಪರಿಚಯಿಸಿ, ಅವರಿಂದ ದೂರಿನ ವಿಷಯವನ್ನು ಕೇಳಿ ತಿಳಿದ ನಂತರ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿದ ಎರಡು ಸಂಭಾಷಣೆಗಳನ್ನು ಪಂಚರಿಗೆ ಕೇಳಿಸಿ, ಅವುಗಳನ್ನು ಆಪೀಕರಣ ಮಾಡಿ, ಅವುಗಳನ್ನು ಎರಡು ಸಿ.ಡಿ.ಗಳಿಗೆ ವರ್ಗಾಯಿಸಿರುತ್ತಾರೆ.

4) ದೂರುದಾರರು ಲಂಚದ ಹಣ ರೂ. 5,000/- ಗಳನ್ನು ಹಾಜರುಪಡಿಸಿದ್ದು, ಅವುಗಳ ಮುಖಬೆಲೆ ಮತ್ತು ನೋಟಿನ ಸಂಖ್ಯೆಗಳನ್ನು ಪ್ರತ್ಯೇಕ ಹಾಳೆಯಲ್ಲಿ ನಮೂದಿಸಿ, ಪಂಚರ ಮತ್ತು ತನಿಖಾಧಿಕಾರಿಗಳ ಸಹಿ ಪಡೆದಿರುತ್ತಾರೆ. ಸದರಿ ಹಣಕ್ಕೆ ಫಿನಾಪ್ತಲಿನ್ ಪೌಡರ್ ಲೇಪಿಸಿ, ಸೋಡಿಯಂ ಕಾರ್ಬೋನೇಟ್ ದ್ರಾವಣ ತಯಾರಿಸಿ, ಸದರಿ ದ್ರಾವಣದಲ್ಲಿ ನೋಟುಗಳಿಗೆ ಫಿನಾಪ್ತಲಿನ್ ಪೌಡರ್ ಲೇಪಿಸಿದ ಶ್ರೀ ಮಧುಸೂದನ, ಪೊಲೀಸ್ ಇನ್ಸ್‌ಪೆಕ್ಟರ್‌ರವರ ಕೈ ಬೆರಳುಗಳನ್ನು ಅದ್ದಿ ತೊಳೆದಾಗ ಅದು ತಿಳಿ ಗುಲಾಬಿ ಬಣ್ಣಕ್ಕೆ ಬಂದಿರುತ್ತದೆ. ಈ ಬಗ್ಗೆ ಮಾದರಿ ದ್ರಾವಣ ಹಾಗೂ ಗುಲಾಬಿ ಬಣ್ಣಕ್ಕೆ ತಿರುಗಿದ ದ್ರಾವಣಗಳನ್ನು ಪ್ರತ್ಯೇಕವಾಗಿ ವಶಪಡಿಸಿಕೊಂಡು, ಹಂತ ಹಂತವಾಗಿ ಫೋಟೋಗಳನ್ನು ತೆಗೆದಿರುತ್ತಾರೆ.

5) ಪ್ರಕರಣದ ಮಾಹಿತಿ ಗೌಪ್ಯತೆಯನ್ನು ಕಾಪಾಡಿಕೊಳ್ಳಲು ತನಿಖಾಧಿಕಾರಿಯವರು ಎಲ್ಲರಿಗೂ ಸೂಚಿಸಿರುತ್ತಾರೆ. ಸಂಭಾಷಣೆಯ ಸಿ.ಡಿ.ಗಳನ್ನು ವಶಪಡಿಸಿ ಕೊಂಡಿರುತ್ತಾರೆ. ಶ್ರೀ ಡಿ. ಪ್ರಮೋದ ಕುಮಾರ್ ಬಿನ್ ಯಲಗುರೇಶ್, ದ್ವಿ.ದ.ಸ. ಜಿಲ್ಲಾಧಿಕಾರಿಗಳ ಕಛೇರಿ, ದಾವಣಗೆರೆ ಇವರನ್ನು ನೆರಳು ಸಾಕ್ಷಿಯಾಗಿ ತನಿಖಾಧಿಕಾರಿಗಳು ನೇಮಿಸಿರುತ್ತಾರೆ. ಸದರಿಯವರಿಗೆ ದೂರುದಾರರೊಂದಿಗೆ ಎದುರುದಾರರ ಬಳಿ ಹೋಗಿ, ಅನುಮಾನ ಬಾರದಂತೆ ಮತ್ತು ಎದುರುದಾರ

ಹಾಗೂ ದೂರುದಾರರ ನಡುವೆ ನಡೆದ ಸಂಭಾಷಣೆಯನ್ನು ಕೇಳಿಸಿಕೊಂಡು ಘಟನೆಯನ್ನು ವೀಕ್ಷಿಸಿ, ಎದುರುದಾರರು ಹಣವನ್ನು ಕೇಳಿ ಪಡೆದುಕೊಂಡರೆ, ಹಣವನ್ನು ಹೇಗೆ ಪಡೆದುಕೊಳ್ಳುತ್ತಾರೆ, ಹಣವನ್ನು ಎಲ್ಲಿ ಇಟ್ಟುಕೊಳ್ಳುತ್ತಾರೆ ಎಂಬುದನ್ನು ಗಮನಿಸಿ, ನಂತರ ತಿಳಿಸಬೇಕೆಂದು ತನಿಖಾಧಿಕಾರಿಯವರು ತಿಳಿಸಿರುತ್ತಾರೆ. ದೂರುದಾರರಿಗೆ ಸೋನಿ ಕಂಪನಿಯ ವಾಯ್ಸ್ ರೆಕಾರ್ಡರ್‌ನಲ್ಲಿ ದೂರುದಾರರ ಮತ್ತು ಎದುರುದಾರರ ಮಧ್ಯೆ ನಡೆಯುವ ಧ್ವನಿ ಸಂಭಾಷಣೆಯನ್ನು ಮುದ್ರಣ ಮಾಡಿಕೊಳ್ಳಲು ಸೂಚಿಸಿರುತ್ತಾರೆ.

6) ದೂರುದಾರರಿಗೆ ಎದುರುದಾರರು ಲಂಚದ ಹಣಕ್ಕೆ ಬೇಡಿಕೆ ಇಟ್ಟು ಸ್ವೀಕರಿಸಿದ ನಂತರ ಹೊರಗೆ ಬಂದು ತಲೆಯನ್ನು ಕೆರೆದುಕೊಳ್ಳುವುದರ ಮೂಲಕ ಸಂಜ್ಞೆ ನೀಡಬೇಕೆಂದು ತನಿಖಾಧಿಕಾರಿಗಳು ಸೂಚಿಸಿರುತ್ತಾರೆ. ಈ ಬಗ್ಗೆ ಸವಿಸ್ತಾರ ಪ್ರಾಯೋಗಿಕ ಪಂಚನಾಮೆಯನ್ನು ಮಧ್ಯಾಹ್ನ 12-30 ರಿಂದ 2-30 ಘಂಟೆಯವರೆಗೆ ಠಾಣೆಯಲ್ಲಿ ನಿರ್ವಹಿಸಿರುತ್ತಾರೆ.

7) ದಿನಾಂಕ 08/01/2020 ರಂದು ದೂರುದಾರರ ಮೊಬೈಲ್‌ನಿಂದ ಎದುರುದಾರರ ಮೊಬೈಲಿಗೆ ಕರೆ ಮಾಡಿದಾಗ ಎದುರುದಾರರು "ಬಿಜಿ ಇದ್ದೇನೆ, ಆ ಮೇಲೆ ಫೋನ್ ಮಾಡು" ಅಂತ ತಿಳಿಸಿರುತ್ತಾರೆ. ಸ್ವಲ್ಪ ಸಮಯದ ನಂತರ ಮತ್ತೆ ಕರೆ ಮಾಡಿದಾಗ ಎದುರುದಾರರು ಕರೆಯನ್ನು ಸ್ವೀಕರಿಸದೇ ಇದ್ದುದರಿಂದ ಹಾಗೂ ಕಛೇರಿ ಸಮಯ ಮೀರಿದ್ದರಿಂದ ತನಿಖೆಯನ್ನು ಮಾರನೇ ದಿನಕ್ಕೆ ಮುಂದೂಡಿದ್ದು, ಈ ಬಗ್ಗೆ ಸಂಜೆ 5-15 ರಿಂದ 6-00 ಘಂಟೆ ಅವಧಿಯಲ್ಲಿ ದಾವಣಗೆರೆ ಭ್ರಷ್ಟಾಚಾರ ನಿಗ್ರಹ ದಳ ಪೊಲೀಸ್ ಠಾಣೆಯಲ್ಲಿ ಟ್ರ್ಯಾಪ್ ಮುಂದೂಡಿದ ಪಂಚನಾಮೆಯನ್ನು ತನಿಖಾಧಿಕಾರಿಗಳು ನಿರ್ವಹಿಸಿರುತ್ತಾರೆ.

8) ದಿನಾಂಕ 09/01/2020 ರಂದು ಬೆಳಗ್ಗೆ 7-30 ಘಂಟೆ ಸಮಯದಲ್ಲಿ ದೂರುದಾರರು, ನೆರಳು ಸಾಕ್ಷಿ ಹಾಗೂ ಸಹ ಪಂಚರವರು ಠಾಣೆಗೆ ಹಾಜರಾಗಿದ್ದು, ತನಿಖಾಧಿಕಾರಿಗಳು ದಿನಾಂಕ 08/01/2020 ರಂದು ಪ್ರಾಯೋಗಿಕ ಪಂಚನಾಮೆ ಸಮಯದಲ್ಲಿ ಫಿನಾಪ್ತಲಿನ್ ಪುಡಿ ಸವರಿದ ನೋಟುಗಳನ್ನು ಹಾಜರುಪಡಿಸಿದ್ದು, ಸದರಿ ನೋಟುಗಳ ಸಂಖ್ಯೆ, ಮೌಲ್ಯ ಮತ್ತು ಕ್ರಮ ಸಂಖ್ಯೆಗಳನ್ನು ಪರಿಶೀಲಿಸಿದ್ದು ಹೊಂದಾಣಿಕೆಯಾಗಿರುತ್ತವೆ. ಸದರಿ ನೋಟುಗಳನ್ನು ದೂರುದಾರರ ಶರ್ಟಿನ ಎದೆಯ ಜೇಬಿನಲ್ಲಿ, ಸಹ ಪಂಚ ಶ್ರೀ ಎ. ಎಂ. ವೀರೇಶಯ್ಯ ಬಿನ್ ಎ. ಎಂ.

ಶರಣಯ್ಯ, ಪ್ರ.ದ.ಸ. ಜಿಲ್ಲಾಧಿಕಾರಿಗಳ ಕಛೇರಿ, ದಾವಣಗೆರೆ ಇವರು ಇರಿಸಿದ್ದು ಇರುತ್ತದೆ.

9) ದಿನಾಂಕ 09/01/2020 ರಂದು ತನಿಖಾಧಿಕಾರಿಯವರ ಸೂಚನೆಯಂತೆ ಸರ್ಕಾರಿ ವಾಹನ ಮತ್ತು ದ್ವಿ ಚಕ್ರ ವಾಹನಗಳಲ್ಲಿ ದೂರುದಾರರು, ಇಬ್ಬರು ಪಂಚರು ದೂರುದಾರನ ಅಣ್ಣನ ಮಗ ಯೋಗೇಶ ನಾಯ್ಕ, ತನಿಖಾಧಿಕಾರಿಗಳು ಹಾಗೂ ಪೋಲೀಸ್ ಸಿಬ್ಬಂದಿಯವರೊಂದಿಗೆ ಹೊರಟು ಸಿದ್ದಮ್ಮ ಪಾರ್ಕ್ ಬಳಿ ವಾಹನಗಳನ್ನು ನಿಲ್ಲಿಸಿ ದೂರುದಾರರು, ನೆರಳು ಸಾಕ್ಷಿ ಹಾಗೂ ದೂರುದಾರರ ಅಣ್ಣನ ಮಗ ಇವರೊಂದಿಗೆ ಹೊರಟಾಗ ದೀಕ್ಷಿತ್ ರಸ್ತೆಯಲ್ಲಿರುವ ಜಗಳೂರು ಶಾಸಕರಾದ ಶ್ರೀ ಎಸ್. ವಿ. ರಾಮಚಂದ್ರಪ್ಪರವರ ಮನೆ ಬಳಿ ಎದುರುದಾರರು ದೂರುದಾರರನ್ನು ನಿಲ್ಲಿಸಿಕೊಂಡಿದ್ದು, ದೂರುದಾರರ ಜೊತೆ ಅವರ ಅಣ್ಣನ ಮಗ ಮತ್ತು ನೆರಳು ಸಾಕ್ಷಿ ಎದುರುದಾರರ ಹತ್ತಿರ ಬಂದಿರುತ್ತಾರೆ. ಉಳಿದ ಅಧಿಕಾರಿ, ಸಿಬ್ಬಂದಿಯವರು ಮತ್ತು ಸಹ ಪಂಚರವರು ದೂರದಲ್ಲಿ ನಿಂತು ವಾಚ್ ಮಾಡುತ್ತಿದ್ದು, ದೂರುದಾರರು ತಮ್ಮ ಕೆಲಸದ ಬಗ್ಗೆ ಮಾತನಾಡಿದಾಗ, ಎದುರುದಾರರು ದೂರುದಾರರಿಗೆ ಅವರ ಬೈಕ್ ಹಿಂಬಾಲಿಸುವಂತೆ ಸೂಚನೆ ನೀಡಿ ಮುಂದೆ ಹೊರಟಾಗ, ದೂರುದಾರರ ಅಣ್ಣನ ಮಗ, ತನಿಖಾಧಿಕಾರಿ ಹಾಗೂ ಪಂಚ ಸಾಕ್ಷಿಗಳು ಗುಪ್ತವಾಗಿ ಎದುರುದಾರರನ್ನು ಹಿಂಬಾಲಿಸಿರುತ್ತಾರೆ.

10) ಎದುರುದಾರರು ಎ.ಪಿ.ಎಂ.ಸಿ.ಯ ಶಿವ ಸಹಕಾರಿ ಬ್ಯಾಂಕ್ ಬಳಿ ದೂರುದಾರ ಮತ್ತು ಅವರ ಅಣ್ಣನ ಮಗನನ್ನು ಕರೆದುಕೊಂಡು ಹೋಗಿ ದೂರುದಾರರು ತಮ್ಮ ಕೆಲಸದ ಬಗ್ಗೆ ದಾಖಲಾತಿಗಳ ಬಗ್ಗೆ ವಿಚಾರಿಸಿದಾಗ ಎದುರುದಾರರು "ನಾನ್ ತನ್ವೀರ್ ಬೋರ್ ಲಾರಿಗೆ ಹೇಳ್ತನಿ, ನೀವು ಅವ್ರಿಗೆ ಫೋನ್ ಮಾಡಿ" ಎಂದು ದೂರುದಾರರಿಗೆ ಹೇಳಿ ಲಂಚದ ಹಣದ ಬಗ್ಗೆ ಸಂಜ್ಞೆ ಮಾಡಿದಾಗ, ಎದುರುದಾರರು ದೂರುದಾರರಿಗೆ ಎದುರುದಾರರ ಜೊತೆಯಲ್ಲಿ ಕರೆದುಕೊಂಡು ಬಂದಿದ್ದ ವ್ಯಕ್ತಿಗೆ ಲಂಚದ ಹಣವನ್ನು ಕೊಡುವಂತೆ ಹೇಳಿದಾಗ, ಆ ವ್ಯಕ್ತಿಯು ಆ ಹಣವನ್ನು ತೆಗೆದುಕೊಳ್ಳಲಿಲ್ಲ. ನಂತರ ಎದುರುದಾರರು 'ಮುಂದೆ ಬನ್ನಿ' ಅಂತ ಹೇಳಿ ಬೈಕ್ ನಲ್ಲಿ ಹೊರಟಿದ್ದು ಆಗ ದೂರುದಾರ ಮತ್ತು ಅವರ ಅಣ್ಣನ ಮಗ ಹಿಂದೆ ಹೋಗಿದ್ದು ಸ್ವಲ್ಪ ದೂರ ಹಿಂಬಾಲಿಸಿದ್ದು, ಎ.ಪಿ.ಎಂ.ಸಿ.ಯ ಫ್ಲೈ ಓವರ್ ಮೇಲೆ ಎದುರುದಾರರು ದೂರುದಾರರ ಕಡೆಯಿಂದ ಹಣವನ್ನು ಪಡೆದು ಒಂದು ಚೀಟಿಯನ್ನು ಕೊಟ್ಟು ಹೊರಟಿದ್ದು, ಆಗ ಸಮಯ 10-30 ಆಗಿದ್ದು, ಈ ಬಗ್ಗೆ ದೂರುದಾರರು ತಮ್ಮ

ತಲೆಯನ್ನು ಕೆರೆದುಕೊಳ್ಳುವುದರ ಮೂಲಕ ತನಿಖಾಧಿಕಾರಿ, ಸಿಬ್ಬಂದಿ ಹಾಗೂ ಪಂಚ ಸಾಕ್ಷಿದಾರರಿಗೆ ಸಂಜ್ಞೆ ನೀಡಿರುತ್ತಾರೆ. ಆಗ ಎದುರುದಾರರು ಬೈಕನ್ನು ಚಲಾಯಿಸಿಕೊಂಡು ಹೋಗುತ್ತಿರುವಾಗ ಅವರನ್ನು ಬೆನ್ನಟ್ಟಿ ಪಿ. ಬಿ. ರಸ್ತೆಯ ತ್ರಿಶೂಲ್ ಕಂಫರ್ಟ್ ಎದುರು ಬೈಕನ್ನು ಅಡ್ಡ ಹಾಕಿ ಶ್ರೀ ಕಲ್ಲೇಶಪ್ಪ, ಸಿ.ಪಿ.ಸಿ. ರವರು ಎದುರುದಾರರ ಎಡಗೈಯನ್ನು ಮತ್ತು ಶ್ರೀ ವೀರೇಶಪ್ಪ ರವರು ಬಲಗೈಯನ್ನು ಹಿಡಿದುಕೊಂಡಿರುತ್ತಾರೆ. ಆಗ ಬೆಳಿಗ್ಗೆ 10-45 ಘಂಟೆ ಆಗಿತ್ತು. ತನಿಖಾಧಿಕಾರಿಗಳು ದೂರುದಾರರಿಂದ ವಾಯ್ಸ್ ರೆಕಾರ್ಡರ್‌ನ್ನು ಪಡೆದು ಎದುರುದಾರರ ಹೆಸರು ತಿಳಿದುಕೊಂಡು ತಮ್ಮ ಗುರುತಿನ ಚೀಟಿ ತೋರಿಸಿ ಎಲ್ಲರ ಪರಿಚಯವನ್ನು ಮಾಡಿಸಿರುತ್ತಾರೆ. ಸದರಿ ಸ್ಥಳದ ಚಕ್ಕು ಬಂದಿಯೊಂದಿಗೆ ಪಂಚನಾಮೆಯನ್ನು ನಿರ್ವಹಿಸುತ್ತಾ, ಸದರಿ ಸ್ಥಳವು ಸಾರ್ವಜನಿಕ ಸ್ಥಳವಾಗಿದ್ದರಿಂದ ಎದುರುದಾರರ ಕಛೇರಿಗೆ ಕರೆದುಕೊಂಡು ಬಂದಿರುತ್ತಾರೆ. ಆಗ ಬೆಳಿಗ್ಗೆ 11-00 ಘಂಟೆಯಾಗಿತ್ತು.

11) ತನಿಖಾಧಿಕಾರಿಗಳು ದೂರುದಾರರು ಮತ್ತು ನೆರಳು ಸಾಕ್ಷಿಯಿಂದ ನಡೆದ ಘಟನಾವಳಿಗಳ ಬಗ್ಗೆ ಮಾಹಿತಿ ಪಡೆದುಕೊಂಡು, ಸದರಿ ಕಛೇರಿಯಲ್ಲಿದ್ದ ಜಿಲ್ಲಾ ವ್ಯವಸ್ಥಾಪಕರಾದ ಶ್ರೀ ಪಿ. ರಮೇಶ್ ರವರಿಗೆ ಪ್ರಕರಣದ ಮಾಹಿತಿಯನ್ನು ತಿಳಿಸಿ ಎದುರುದಾರರನ್ನು ಟ್ರ್ಯಾಪ್ ಮಾಡಿದ ವಿಷಯ ತಿಳಿಸಿ, ತನಿಖೆಗೆ ಸಂಬಂಧಪಟ್ಟ ಪಂಚನಾಮೆ ಜರುಗಿಸಲು ಸ್ಥಳಾವಕಾಶವನ್ನು ಕೋರಿ ಮೌಖಿಕ ಅನುಮತಿಯನ್ನು ಪಡೆದಿರುತ್ತಾರೆ. ದೂರುದಾರರು ನೀಡಿದ ದೂರಿನ ಬಗ್ಗೆ ಮತ್ತು ಎದುರುದಾರರ ಹಾಗೂ ದೂರುದಾರರ ಮಧ್ಯೆ ನಡೆದ ಸಂಭಾಷಣೆಗಳ ಬಗ್ಗೆ ತಿಳಿಸಿ, ಸದರಿ ಸಂಭಾಷಣೆಯ ಲಿಪೀಕರಣ ಮಾಡಿರುತ್ತಾರೆ.

12) ತನಿಖಾಧಿಕಾರಿಗಳು ಸೋಡಿಯಂ ಕಾರ್ಬೋನೇಟ್ ದ್ರಾವಣಗಳನ್ನು ಎರಡು ಪ್ಲಾಸ್ಟಿಕ್ ಬಟ್ಟಲುಗಳಲ್ಲಿ ತಯಾರಿಸಿ, ಸ್ವಲ್ಪ ದ್ರಾವಣವನ್ನು ಮಾದರಿಗಾಗಿ ಪ್ರತ್ಯೇಕವಾಗಿ ಬಾಟಲ್‌ನಲ್ಲಿ ತೆಗೆದು ವಶಪಡಿಸಿಕೊಂಡಿರುತ್ತಾರೆ. ಎದುರುದಾರರ ಎರಡೂ ಕೈ ಬೆರಳುಗಳನ್ನು ಪ್ರತ್ಯೇಕವಾಗಿ ದ್ರಾವಣದಲ್ಲಿ ಅದ್ದಿ ತೊಳೆದಾಗ, ದ್ರಾವಣಗಳು ತಿಳಿ ಗುಲಾಬಿ ಬಣ್ಣಕ್ಕೆ ಪರಿವರ್ತನೆಯಾಗಿದ್ದು ಎರಡೂ ದ್ರಾವಣಗಳನ್ನು ಪ್ರತ್ಯೇಕವಾಗಿ ಖಾಲಿ ಬಾಟಲ್‌ಗಳಲ್ಲಿ ಶೇಖರಿಸಿ ಅಮಾನತ್ತು ಪಡಿಸಿಕೊಂಡಿರುತ್ತಾರೆ.

13) ತನಿಖಾಧಿಕಾರಿಗಳು ಎದುರುದಾರರಿಗೆ ಲಂಚದ ಹಣವನ್ನು ಹಾಜರುಪಡಿಸಲು ತಿಳಿಸಿದ್ದು, ಅವರು ಹಣವನ್ನು ಹೊರಗೆ ತೆಗೆಯಲು ಅಸಹಕಾರ ತೋರಿಸಿರುತ್ತಾರೆ. ನಂತರ ದೂರುದಾರರಿಗೆ ಲಂಚದ ಹಣವನ್ನು ಎಲ್ಲಿ ಇಟ್ಟುಕೊಂಡಿರುತ್ತಾರೆ ಎಂದು

ವಿಚಾರಿಸಿದಾಗ, ಎದುರುದಾರರು ಪ್ಯಾಂಟಿನ ಎಡ ಜೇಬಿನಲ್ಲಿ ಇಟ್ಟುಕೊಂಡಿರುವುದಾಗಿ ತಿಳಿಸಿರುತ್ತಾರೆ. ತನಿಖಾಧಿಕಾರಿಗಳ ಸೂಚನೆ ಮೇರೆಗೆ ನೆರಳು ಸಾಕ್ಷಿ ಪ್ರಮೋದ ಕುಮಾರ್‌ರವರು ಎದುರುದಾರರು ಧರಿಸಿದ ಪ್ಯಾಂಟಿನ ಎಡಭಾಗದ ಜೇಬಿನಿಂದ ಹಣವನ್ನು ತೆಗೆದು ಹಾಜರುಪಡಿಸಿದಾಗ, ಸದರಿ ನೋಟುಗಳ ಮೌಲ್ಯ, ಸಂಖ್ಯೆ ಇವುಗಳನ್ನು ಸಹ ಪಂಚ ವೀರೇಶಯ್ಯ ಹೇಳಿದಂತೆ ನೆರಳು ಸಾಕ್ಷಿ ಬರೆದುಕೊಂಡಿರುತ್ತಾರೆ. ಸದರಿ ನೋಟುಗಳ ಸಂಖ್ಯೆ ಮೌಲ್ಯ ಮುಂತಾದವುಗಳನ್ನು ಪರಿಶೀಲಿಸಲಾಗಿ ಅವು ಪ್ರಾಯೋಗಿಕ ಪಂಚನಾಮೆಯಲ್ಲಿ ಬರೆದ ನೋಟುಗಳ ಸಂಖ್ಯೆ ಮತ್ತು ಮೌಲ್ಯಗಳಿಗೆ ತಾಳೆಯಾಗಿರುತ್ತವೆ. ಸದರಿ ನೋಟುಗಳ್ನು ತನಿಖಾಧಿಕಾರಿಯವರು ಪ್ರತ್ಯೇಕವಾಗಿ ಅಮಾನತ್ತು ಪಡಿಸಿಕೊಂಡಿರುತ್ತಾರೆ.

14) ಎದುರುದಾರರಿಗೆ ತನಿಖಾಧಿಕಾರಿಯವರು ಬದಲಿ ಪ್ಯಾಂಟಿನ ವ್ಯವಸ್ಥೆ ಮಾಡಿ, ಅವರು ಧರಿಸಿದ್ದ ಪ್ಯಾಂಟನ್ನು ಪಡೆದು ಪ್ಯಾಂಟಿನ ಎಡ ಜೇಬನ್ನು ತಿರುವು ಮಾಡಿ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದಾಗ ಅದು ತಿಳಿ ಗುಲಾಬಿ ಬಣ್ಣಕ್ಕೆ ಬಂದಿದ್ದು, ಸದರಿ ದ್ರಾವಣವನ್ನೂ ಸಹ ಖಾಲಿ ಬಾಟಲ್‌ನಲ್ಲಿ ಶೇಖರಿಸಿ ವಶಪಡಿಸಿಕೊಂಡಿರುತ್ತಾರೆ.

15) ದೂರುದಾರರು ತನಿಖಾಧಿಕಾರಿಯವರ ಸೂಚನೆಯಂತೆ ಒಂದು ಚೀಟಿಯನ್ನು ಹಾಜರುಪಡಿಸಿದ್ದು, ಅದರಲ್ಲಿ ಎದುರುದಾರರ ಹಸ್ತಾಕ್ಷರ ಹಾಗೂ ಸಹಿ ಹಾಗೂ ಮೊಹರು ಇರುವ ಹಾಗೂ ಈ ಪ್ರಕರಣಕ್ಕೆ ಸಂಬಂಧಪಟ್ಟ ಮಾಹಿತಿ ಇದ್ದು ಸದರಿ ದಾಖಲಾತಿಯು ಸರ್ಕಾರಿ ದಾಖಲಾತಿ ಆಗಿರುವುದಿಲ್ಲವೆಂದು ಕಛೇರಿ ವ್ಯವಸ್ಥಾಪಕರಾದ ಶ್ರೀ ಪಿ. ರಮೇಶ್ ರವರು ತಿಳಿಸಿರುತ್ತಾರೆ. ಈ ರೀತಿ ಯಾವುದೇ ಚೀಟಿ ಕೊಡುವ ಪದ್ಧತಿ ಇರುವುದಿಲ್ಲ, ಇದು ಅಕ್ಷಮ್ಯ ಅಪರಾಧವೆಂದು ಸದರಿ ವ್ಯವಸ್ಥಾಪಕರು ತಿಳಿಸಿದ್ದರಿಂದ ಸದರಿ ಚೀಟಿಯನ್ನು ತನಿಖಾಧಿಕಾರಿಗಳು ವಶಪಡಿಸಿಕೊಂಡಿರುತ್ತಾರೆ.

16) ದೂರುದಾರರ ತಾಯಿ ಶ್ರೀಮತಿ ಚನ್ನಿಬಾಯಿ ರವರು ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಬೋರ್‌ವೆಲ್ ಕೊರೆಸಲು ಸಲ್ಲಿಸಿದ್ದ ಅರ್ಜಿಗೆ ಸಂಬಂಧಪಟ್ಟ ದಾಖಲಾತಿಗಳನ್ನು ಹಾಜರುಪಡಿಸುವಂತೆ ಜಿಲ್ಲಾ ವ್ಯವಸ್ಥಾಪಕರಿಗೆ ತನಿಖಾಧಿಕಾರಿಗಳು ಕೋರಿದ್ದು, ಸದರಿ ದಾಖಲಾತಿಗಳನ್ನು ತನಿಖಾಧಿಕಾರಿಯವರ ಮುಂದೆ ಹಾಜರುಪಡಿಸಿದ ನಂತರ ತನಿಖಾಧಿಕಾರಿಗಳು ಪರಿಶೀಲಿಸಿ, ಅವುಗಳ

ಜೆರಾಕ್ಸ್ ಪ್ರತಿಗಳನ್ನು ದೃಢೀಕರಿಸಿ ಮುಂದಿನ ತನಿಖೆ ಸಂಬಂಧ ವಶಪಡಿಸಿಕೊಂಡಿರುತ್ತಾರೆ. ಎದುರುದಾರರಿಗೆ ಈ ಬಗ್ಗೆ ಸಮಜಾಯಿಷಿ ಬರೆದುಕೊಡುವಂತೆ ತನಿಖಾಧಿಕಾರಿಗಳು ಸೂಚಿಸಿದ್ದರ ಮೇರೆಗೆ ಎದುರುದಾರರು ತಮ್ಮ ಹಸ್ತಾಕ್ಷರಗಳಲ್ಲಿ "ದಿನಾಂಕ 9/1/2020 ಕ್ಕೆ ಅನ್ವಯಿಸುವಂತೆ, ಶ್ರೀ ಜಯನಾಯ್ಕ ತಂದೆ ಶಾಕ್ರ್ಯಾನಾಯ್ಕ ಇವರಿಂದ ಯಾವುದೇ ರೀತಿಯ ಲಂಚದ ಹಣವನ್ನು ಸ್ವೀಕರಿಸಿರುವುದಿಲ್ಲ ನನಗೆ ನನ್ನ ಎರಡು ಕೈಗಳನ್ನು ಬಲವಂತವಾಗಿ ಹಿಡಿದುಕೊಂಡು ಇಬ್ಬರು ಪೋಲೀಸಿನವರು ನನ್ನ ಪ್ಯಾಂಟಿನ ಜೇಬಿಗೆ ಹಾಕಿರುತ್ತಾರೆ. ಆದ ಕಾರಣ ನಾನು ಯಾವುದೇ ಲಂಚದ ಹಣವನ್ನು ಶ್ರೀ ಜಯನಾಯ್ಕರಿಂದ ಪಡೆದಿರುವುದಿಲ್ಲ" ಎಂದು ಸಮಜಾಯಿಷಿ ನೀಡಿರುತ್ತಾರೆ. ಈ ಬಗ್ಗೆ ದೂರುದಾರರಿಗೆ ಮತ್ತು ನೆರಳು ಸಾಕ್ಷಿರವರಿಗೆ ವಿಚಾರಿಸಲಾಗಿ ಎದುರುದಾರರು ನೀಡಿದ ಸಮಜಾಯಿಷಿಯನ್ನು ಒಪ್ಪಿರುವುದಿಲ್ಲ.

17) ದೂರುದಾರರು ಎದುರುದಾರರಿಗೆ ಲಂಚದ ಹಣ ನೀಡುವ ಸಂದರ್ಭದಲ್ಲಿ ನಡೆದ ಸಂಭಾಷಣೆಯನ್ನು ಠಾಣೆಯ ಸೋನಿ ವಾಯ್ಸ್ ರೆಕಾರ್ಡರ್‌ನಲ್ಲಿ ರೆಕಾರ್ಡ್ ಮಾಡಿ ಸದರಿ ಸಂಭಾಷಣೆಯನ್ನು ಕಂಪ್ಯೂಟರ್ ಮುಖಾಂತರ ಎಲ್ಲರಿಗೂ ಕೇಳಿಸಿ ಒಂದು ಸಿ.ಡಿ.ಗೆ ವರ್ಗಾಯಿಸಿದ್ದಲ್ಲದೆ ಆಪೀಕರಣ ಮಾಡಿ ತನಿಖಾಧಿಕಾರಿಗಳು ವಶಪಡಿಸಿಕೊಂಡಿರುತ್ತಾರೆ. ದೂರುದಾರ ಮತ್ತು ಎದುರುದಾರರ ನಡುವೆ ಆದಂತಹ ಸಂಭಾಷಣೆಗಳನ್ನು ಎದುರುದಾರರ ಮೇಲಾಧಿಕಾರಿ ವ್ಯವಸ್ಥಾಪಕರಾದ ಶ್ರೀ ಪಿ. ರಮೇಶ್ ರವರಿಗೆ ಕೇಳಿಸಿದ್ದು, ಸದರಿ ಸಂಭಾಷಣೆಗಳಲ್ಲಿ ಒಂದು ಧ್ವನಿಯು ಎದುರುದಾರರದ್ದಾಗಿರುತ್ತದೆ ಎಂದು ಗುರ್ತಿಸಿರುತ್ತಾರೆ. ಈ ಎಲ್ಲಾ ನಡವಳಿಕೆಗಳ ಬಗ್ಗೆ ಸೋನಿ ಕಂಪನಿಯ ಹ್ಯಾಂಡಿ ಕ್ಯಾಮ್‌ನಿಂದ ವಿಡಿಯೋ ಮಾಡಿರುತ್ತಾರೆ ಹಾಗೂ ಫೋಟೋಗಳನ್ನು ಪ್ರತ್ಯೇಕವಾಗಿ ತೆಗೆದು ಡಿ. ವಿ. ಡಿ. ಗಳಿಗೆ ವರ್ಗಾಯಿಸಿ ವಶಕ್ಕೆ ಪಡೆದಿರುತ್ತಾರೆ. ಈ ಬಗ್ಗೆ ಸವಿಸ್ತಾರ ಪಂಚನಾಮೆಯನ್ನು ಬೆಳಿಗ್ಗೆ 11-15 ರಿಂದ ಮಧ್ಯಾಹ್ನ 4-00 ಘಂಟೆಯವರೆಗೆ ತನಿಖಾಧಿಕಾರಿಗಳು ನಿರ್ವಹಿಸಿರುತ್ತಾರೆ.

18) ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ ಹಾಗೂ ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ ಮತ್ತು ಇತರ ಅಂಶಗಳು, ಎದುರುದಾರರ ದುರ್ನಡತೆಯನ್ನು ತೋರಿಸುತ್ತದೆ.

19) ಧ್ವನಿ ವಿಶ್ಲೇಷಣಾ ವರದಿ ಬರುವುದು ಬಾಕಿ ಇರುತ್ತದೆ. ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ಎದುರುದಾರರಿಂದ ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೇ ಮಾಲುಗಳಲ್ಲಿ ಫಿನಾಪ್ತಲಿನ್ ಅಂಶ ಇರುವುದು ದೃಢಪಟ್ಟಿರುತ್ತದೆ.

20) ಎದುರುದಾರರಿಗೆ ದಿನಾಂಕ 01/07/2022 ರಂದು ಪರಿವೀಕ್ಷಣಾ ಟಿಪ್ಪಣಿಯನ್ನು ಕಳುಹಿಸಿದ್ದು ಅದಕ್ಕೆ ಸದರಿಯವರು ತಮ್ಮ ಸಮಜಾಯಿಷಿಯನ್ನು ದಿನಾಂಕ 25/07/2022 ರಂದು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಷಿಯನ್ನು ಪರಿಶೀಲಿಸಲಾಗಿ "ನನ್ನ ಮೇಲೆ ಆಪಾದನೆ ಮಾಡಿರತಕ್ಕಂತಹ ಎಲ್ಲಾ ಆರೋಪಗಳು ಶುದ್ಧ ಸುಳ್ಳಿನಿಂದ ಕೂಡಿದ್ದು, ನಾನು ಯಾವುದೇ ರೀತಿಯ ಕರ್ತವ್ಯದಲ್ಲಿ ದುರ್ನಡತೆಯನ್ನು ತೋರಿರುವುದಿಲ್ಲ. ನಾನು ಸೇವೆಗೆ ಸೇರಿದ ಅವಧಿಯಿಂದಲೂ ಇಲ್ಲಿಯವರೆಗೂ ಯಾವುದೇ ರೀತಿಯಾದ ಕರ್ತವ್ಯ ಲೋಪ ಎಸಗಿಲ್ಲ ಹಾಗೂ ದುರ್ನಡತೆಯನ್ನು ತೋರಿಲ್ಲ, ಯಾವುದೇ ರೀತಿಯ ಕಪ್ಪು ಚುಕ್ಕೆಯು ಸಹ ನನ್ನ ಕರ್ತವ್ಯದಲ್ಲಿ ಎಸಗಿರುವುದಿಲ್ಲ. ಅಲ್ಲದೇ ನನ್ನ ಸೇವೆಯಲ್ಲಿ ಪ್ರಾಮಾಣಿಕತೆಯಿಂದ ಕರ್ತವ್ಯ ನಿರ್ವಹಿಸುತ್ತಿದ್ದು, ನನಗೆ ಆಗದವರು ಈ ರೀತಿಯ ಆಪಾದನೆಯನ್ನು ತಮಗೆ ಪ್ರೇರೇಪಿಸಿ ನನ್ನನ್ನು ಬಲಿಪಶುವಾಗಿ ಮಾಡಿರುತ್ತಾರೆ ಹಾಗೂ ನನಗೆ ತೊಂದರೆಯನ್ನು ಕೊಡುವ ಮತ್ತು ನನ್ನ ದಕ್ಷ ಸೇವೆಗೆ ಮಸಿ ಬಳಿಯುವ ಹುನ್ನಾರದಿಂದ ಈ ಕೃತ್ಯವನ್ನು ಎಸಗಿರುತ್ತಾರೆ. ನನಗೂ ತಾವು ಮಾಡಿರುವಂತಹ ಆಪಾದನೆಗಳಿಗೂ ಯಾವುದೇ ರೀತಿಯ ಸಂಬಂಧವಿರುವುದಿಲ್ಲ." ಎಂದು ಎದುರುದಾರರು ಆಪಾದನೆಗಳನ್ನು ನಿರಾಕರಿಸಿದ್ದು, ಅವರು ನೀಡಿರುವ ಸಮಜಾಯಿಷಿ ಅಂಶಗಳ ಮೇರೆಗೆ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳು ಕಂಡುಬರುವುದಿಲ್ಲ.

21) ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ, ಧ್ವನಿ ವಿಶ್ಲೇಷಣಾ ವರದಿ, ರಾಸಾಯನಿಕ ತಜ್ಞರ ಪರೀಕ್ಷಾ ವರದಿ ಮತ್ತು ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೇ ಮಾಲುಗಳಲ್ಲಿ ಫಿನಾಪ್ತಲಿನ್ ಅಂಶ ಇವುಗಳನ್ನು ಪರಿಶೀಲಿಸಿದಾಗ ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು

ದುರ್ವರ್ತನೆ/ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ.

22) ಅದಲ್ಲದೆ, ಎದುರುದಾರರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966 ರ (ಪ್ರಸ್ತುತ ಕರ್ನಾಟಕ ನಾಗರಿಕ ಸೇವಾ(ನಡತೆ) 2021 ನಿಯಮ 3 (1) (i ರಿಂದ iii) ರ ಅಡಿಯಲ್ಲಿ ದುರ್ನಡತೆ/ದುರ್ವರ್ತನೆ ಎಸಗಿರುವುದು ಕಂಡುಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರ ಅಡಿ ಪ್ರದತ್ತವಾದ ಅಧಿಕಾರದಡಿ, ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ ಹಾಗೂ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 14(ಎ) ರಡಿ ಈ ಸಂಸ್ಥೆಗೆ ವಹಿಸಬೇಕೆಂದೂ ಕೋರಿದೆ.

23) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

14/11/22

**(ನ್ಯಾಯಮೂರ್ತಿ ಕೆ. ಎನ್. ಫಣೀಂದ್ರ)**
ಉಪಲೋಕಾಯುಕ್ತರು
ಕರ್ನಾಟಕ ರಾಜ್ಯ, ಬೆಂಗಳೂರು.